**ಸಿಸಿ ಃ 612/2023**

**ಚಾಸಾ –2**

**ಪ್ರಾಸಾ –1**

**ಸೋಮವಾರಪೇಟೆ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ ರವರ ನ್ಯಾಯಾಲಯದಲ್ಲಿ**

**ಸಿಸಿ ಃ 612/2023**

ಸಾಕ್ಷಿದಾರರ ಹೆಸರುಃ ಉದಯ್ ಕುಮಾರ್
ತಂದೆ/ಗಂಡ ಹೆಸರುಃ ಪೊನ್ನಪ್ಪ
ವಯಸ್ಸುಃ **40**
ವೃತ್ತಿಃ ಕೃಷಿ
ವಾಸಸ್ಥಳಃ ಕೂತಿ ಗ್ರಾಮ ಸೋಮವಾರಪೇಟೆ.
ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ **04-03-2025**

ಮುಖ್ಯ ವಿಚಾರಣೆಃ ಎಪಿಪಿಯವರಿಂದ

ನನಗೆ ಚಾಸಾ **1, 4** ರಿಂದ **6** ರವರ ಪರಿಚಯವಿಲ್ಲ. ಮತ್ತು ಆರೋಪಿ ಪರಿಚಯ ನನಗೆ ಇದೆ. ಮಹಜರ್ ಅನ್ನು ನಿಪಿ **1** ಎಂದು, ಸಹಿಯನ್ನು ನಿಪಿ **1**ಎ ಎಂದು ಗುರುತಿಸಲಾಯಿತು. ಛಾಯಾ ಚಿತ್ರ ನೋಡಿ ಗುರುತಿಸಿರುತ್ತಾರೆ. ಮಹಜರ್ ಗೆ ಕೂತಿ ಗ್ರಾಮದಲ್ಲಿ ಪೊಲೀಸರ ಕೋರಿಕೆಯ ಮೇರೆಗೆ **2** ವರ್ಷದ ಹಿಂದೆ ಸಹಿ ಮಾಡಿರುತ್ತೇನೆ. ಅಲ್ಲಿ ಏನು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಠಾಣೆಗೆ ಹೋಗಿ ಹೇಳಿಕೆ ನೀಡಿಲ್ಲ.

**(ಸಾಕ್ಷಿಯು ಅಭಿಯೋಜನೆಗೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿಯುತ್ತಿರುವುದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಎಪಿಪಿಯವರು ಪಾಟಿ ಸವಾಲು ನಡೆಸಲು ಅನುಮತಿ ಕೋರಿರುತ್ತಾರೆ. ಅನುಮತಿಸಿದೆ.)**

**ಪಾಟಿ ಸವಾಲುಃ ಎಪಿಪಿಯವರಿಂದ**

ದಿಃ**11-08-2023** ರಂದು ನಾನು ನನ್ನ ಮನೆಯ ಬಳಿ ಕೆಲಸ ಮಾಡುತ್ತಿದ್ದಾಗ **3.30** ಗಂಟೆಗೆ ಪೊಲೀಸರು ನನ್ನನ್ನು ಕರೆದು ಆರೋಪಿ ಮನೆಯಲ್ಲಿ ಕಳ್ಳಬಟ್ಟಿ ಸರಾಯಿ ತಯಾರಿಸಿ ಮಾರಾಟ ಮಾಡುತ್ತಿದ್ದಾರೆ ಮಾಹಿತಿ ಬಂದಿದ್ದು, ಅವರ ಮನೆ ಶೋಧನೆ ಮಾಡಲು ನನ್ನನ್ನು ಮತ್ತು ಚಾಸಾ **3** ರವರನ್ನು ಕರೆಸಿ ನಮಗೆ ಪ್ರಕರಣದ ವಿಚಾರ ತಿಳಿಸಿ ದಾಳಿ ಸಮಯದಲ್ಲಿ ಹಾಜರಿರುವಂತೆ ನಮಗೆ ಕೇಳಿಕೊಂಡರು ಎಂದರೆ ಸರಿಯಲ್ಲ. ಪೊಲೀಸರು ನಮ್ಮನ್ನು ಆರೋಪಿಯ

ಮನೆಗೆ ಕರೆದುಕೊಂಡು ಹೋಗಿ ಅವರ ಮನೆಯ ಮುಂಭಾಗದಿಂದ ಎಡ ಭಾಗದ ಸೌದೆಯನ್ನು ಜೋಡಿಸಿರುವ ಕೊಠಡಿಯಲ್ಲಿ ಪ್ಲಸ್ಟಿಕ್ ಡ್ರಂ ನಲ್ಲಿ ಕಂದು ಬಣ್ಣದ ಹುಳಿ ಘಾಟು ವಾಸನೆಯಿಂದ ಕೂಡಿದ ದ್ರಾವಣ ಇದ್ದು ಅದನ್ನು ನಮ್ಮ ಸಮಕ್ಷಮ ಪರಿಶೀಲಿಸಿದಾಗ ಅದು ಕಳ್ಳಬಟ್ಟಿ ತಯಾರಿಸಲು ಮಾಡಿದ ದ್ರವಣ ಎಂದು ಅಭಿಪ್ರಾಯ ಪಟ್ಟೆವು ಎಂದರೆ ಸರಿಯಲ್ಲ. ಪೊಲೀಸರು ಆರೋಪಿಯನ್ನು ವಿಚಾರಣೆ ಮಾಡಿದಾಗ ಆರೋಪಿ ಕಳ್ಳಬಟ್ಟಿ ತಯಾರಿಸಿ ಮಾರಾಟ ಮಾಡಲು ಪುಳಗಂಜಿ ತಯಾರಿಸಿದ್ದಾರೆ ಎಂದು ತಿಳಿಸಿದ್ದಾರೆ ಎಂದರೆ ಸರಿಯಲ್ಲ. ಅದರ ಪಕ್ಕದಲ್ಲಿ ಸೌದೆ ಕೊಟಿಗೆಯಲ್ಲಿ ಒಂದ ಮೂಳೆಯಲ್ಲಿ 3 ಕಲ್ಲುಗಳನ್ನು ಜೋಡಿಸಿ ಒಂದು ಒಲೆಯನ್ನು ಮಾಡಿ ಅದರ ಮೇಲೆ ಅಲ್ಯೂಮಿನಿಯಂ ಇಡ್ಲಿ ಪಾತ್ರೆ ಇಟ್ಟಿದ್ದು, ಇನ್ನು ಬೆಂಕಿಯನ್ನು ಹಾಕಿರಲಿಲ್ಲ ಎಂದರೆ ಸರಿಯಲ್ಲ. ಇಡ್ಲಿ ಪಾತ್ರೆಯ ಮುಚ್ಚಳವನ್ನು ಪಾತ್ರೆಯ ಮೇಲೆ ಉಲ್ಟಾ ಇಟ್ಟಿದ್ದು ಮುಚ್ಚಳದಲ್ಲಿ ನೀರನ್ನು ಹಾಕಿರುವುದು ಕಂಡು ಬಂತು ಎಂದರೆ ಸರಿಯಲ್ಲ. ಮುಚ್ಚಳ ತೆಗೆದು ನೋಡಿದಾಗ ಒಂದು ಸಿಲ್ವರ್ ಬೌಲ್ ಇಟ್ಟಿದ್ದು ಕೆಳ ಭಾಗದಲ್ಲಿ ಪುಳಗಂಜಿ ಹಾಕಿ ಕಳ್ಳಬಟ್ಟಿ ತಯಾರಿಸಲು ಇಟ್ಟಿರುವುದು ಕಂಡು ಬಂತು ಎಂದರೆ ಸರಿಯಲ್ಲ. ಪುಳಗಂಜಿ ಇದ್ದ ಡ್ರಂ ನಲ್ಲಿ ಸುಮಾರು **15** ಕೊಳೆ ಹಾಕಿದ್ದ ಪುಳಗಂಜಿ ಇದ್ದು ಸುಮಾರು **200** ಮಿಲಿ ಪುಳಗಂಜಿ ತೆಗೆದು ಎರಡು ಪ್ಲಾಸ್ಟಿಕ್ ಡಬ್ಬದಲ್ಲಿ ಹಾಕಿ ಮುಚ್ಚಳವನ್ನು ಭದ್ರಪಡಿಸಿ ಬಟ್ಟೆಯನ್ನು ಸುತ್ತು ಕತ್ತಿ ಅರಗು ಹಾಕಿ ಎಸ್ ಎಂಬ ಅಕ್ಷರದಿಂದ ಸೀಲು ಮಾಡಿ ಅದಕ್ಕೆ ನಮ್ಮ ಸಹಿ ಇರುವ ಚೀಟಿ ಅಂಟಿಸಿದರು ಎಂದರೆ ಸರಿಯಲ್ಲ. ಡ್ರಂ ಮತ್ತು ಪಾತ್ರೆಯಲ್ಲಿ ಉಳಿದಿದ್ದ ಸುಮಾರು **16.5** ಲೀ. ಪುಳಗಂಜಿಯನ್ನು ಸ್ಥಳದಲ್ಲಿ ನಾಶಪಡಿಸಿದರು ಎಂದರೆ ಸರಿಯಲ್ಲ. ನಂತರ ಆರೋಪಿಯನ್ನು ವಶಕ್ಕೆ ಪಡೆದು ಪುಳಗಂಜಿ ಖಾಲಿ ಮಾಡಿದ **20** ಲೀ.ಹಸಿರು ಬಣ್ಣದ ಡ್ರಂ ಮತ್ತು ಕಳ್ಳಬಟ್ಟಿ ತಯಾರಿಸಲು ಉಪಯೋಗಿಸಿದ ಪಾತ್ರೆಗಳನ್ನು ಪೊಲೀಸರು ಸ್ವಾದೀನಕ್ಕೆ ಪಡೆದರು ಎಂದರೆ ಸರಿಯಲ್ಲ. ಸ್ಥಳದಲ್ಲಿ **3.35** ರಿಂದ **4.30** ರವರೆಗೆ ಮಹಜರ್ ಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ಮೇಲಿನಂತೆ ಹೇಳಿಕೆಯನ್ನು

**ಸಿಸಿ : 612/2023**

**ಚಾಸಾ –2**

**ಪ್ರಾಸಾ –1**

ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ 2 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ ಬಿ.ಈ.ಜೆ ವಕೀಲರಿಂದ

**ಇಲ್ಲ.**

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು** ಮಾಡಲಾಗಿದೆ).

ಸಹಿ/-

**ಓ ಹೇ ಕೇ ಸರಿ ಇದೆ**

**ಪ್ರ ದ ನ್ಯಾ ದಂ ಸೋ ಪೇಟೆ**